**ದಿನಾಂಕಃ 20/09/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ. ಜಿ ಸಿ ಜಿ ವಕೀಲರಿಂದಃ**

7. ಸಣ್ಣೆಗೌಡರ ಮಗಳು ಅಕ್ಕಯ್ಯಮ್ಮ ಗೊತ್ತಿಲ್ಲ. ಅಪ್ಪಣ್ಣರವರ ಮಕ್ಕಳಾದ ಕೃಷ್ಣ, ಶ್ರೀನಿವಾಸ ಮತ್ತು ಪ್ರಭಾವತಿ ಗೊತ್ತಿಲ್ಲ. ಅಕ್ಕಯ್ಯಮ್ಮನವರ ಗಂಡ ಅಪ್ಪಣ್ಣ ಎಂದರೆ ಇರಬಹುದು. ದಾವಾ ಸ್ವತ್ತು ಎಂ ಆರ್ ನಂ. 7/1976-77 ರಂತೆ ಬೋಗ್ಯಕ್ಕೆ ಒಳಪಟ್ಟಿತ್ತು ಎಂದರೆ ಸರಿ. ಕ್ರಯಪತ್ರವನ್ನು ಸೃಷ್ಟಿಸುವಾಗ ಸದರಿ ಬೋಗ್ಯದ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಕ್ರಯಪತ್ರವಾದ ನಂತರ ಕೃಷ್ಣ ರವರು ನನ್ನ ವಿರುದ್ಧ ಓಎಸ್ 3/2010 ರ ದಾವೆ ಹೂಡಿದ್ದರು ಎಂದರೆ ಸರಿ. ಶ್ರೀನಿವಾಸ ಮತ್ತು ಪ್ರಭಾವತಿ ಯಾರೆಂದು ಗೊತ್ತಿಲ್ಲ. ಅವರು ಅಕ್ಕಯ್ಯಮ್ಮನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಅವರು ಕ್ರಯಪತ್ರವನ್ನು ಸೃಷ್ಟಿಸಿದ್ದೇನೆಂದು ದಾವೆ ಹೂಡಿದ್ದರು, ಆ ದಾವೆಯನ್ನು ನಾನು ಅವರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

8. ನನ್ನ ತಂದೆಗೆ ನಾನು ನನ್ನ ಅಣ್ಣ. ನನಗೆ ಜಯಮ್ಮ ಎಂಬ ತಂಗಿ ಇದ್ದಾರೆ. ಅವರು ಬದುಕಿದ್ದಾರೆ. ನನ್ನ ತಂಗಿಯನ್ನು ಹುಣಸೇ ಕುಪ್ಪೆ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ. ನಾನು ಚಿಕ್ಕವನಿದ್ದಾಗ ನನ್ನ ತಂಗಿಗೆ ಮದುವೆ ಮಾಡಿದ್ದರು, ಆತ ಎಲ್ಲಿ ಹೋದ ಎಂದು ಗೊತ್ತಿಲ್ಲ, ಆದ್ದರಿಂದ ಆತನ ಹೆಸರು ಗೊತ್ತಿಲ್ಲ. ನನ್ನ ತಂಗಿಗೆ ಮದುವೆ ಮಾಡಿದಾಗ ನನಗೆ 15 ವರುಷ ವಯಸ್ಸಾಗಿತ್ತು. ನನ್ನ ತಂಗಿ ಗಂಡ ಅವರ ಜೊತೆ ಎಷ್ಟು ವರುಷ ಇದ್ದರು ಎಂದು ಗೊತ್ತಿಲ್ಲ. ನನ್ನ ತಂಗಿ ಈಗ ಎಲ್ಲಿ ವಾಸಿಸುತ್ತಿದ್ದಾರೆಂದು ಗೊತ್ತಿಲ್ಲ. ನನ್ನ ತಂಗಿ ಯಾರ ಜೊತೆ ವಾಸಿಸುತ್ತಿದ್ದಾರೆಂದು ಗೊತ್ತಿಲ್ಲ. ನನ್ನ ತಂಗಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದು ಗೊತ್ತಿಲ್ಲ. ಅವರಿಗೂ ನನಗೂ ಯಾವುದೇ ಕಾಂಟಾಕ್ಟ್ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮಕ್ಕಳ ಮದುವೆಗೆ ನನ್ನ ತಂಗಿ ಬಂದಿರಲಿಲ್ಲ ಮತ್ತು ನಾನು ಕರೆದಿರಲಿಲ್ಲ.

9. ನಮ್ಮ ಗ್ರಾಮದ ನಟರಾಜು ಯಾರು ಗೊತ್ತಿಲ್ಲ. ನಟರಾಜು ನನ್ನ ತಂಗಿಯ ಸ್ವಂತ ಮಗ ಎಂದರೆ ಗೊತ್ತಿಲ್ಲ. ನಟರಾಜು ರವರ ಹೆಡಂತಿಯೇ ಈ ದಾವೆಯ 4 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿ ಯಾರ ವಿರುದ್ಧ ಹೂಡಿದ್ದಾರೆಂದು ಗೊತ್ತಿಲ್ಲ.

10. ಓ ಎಸ್ 3/2010 ರ ದಾವೆಯನ್ನು ನಾನು ವಾದಿ, 4 ಮತ್ತು 5 ನೇ ಪ್ರತಿವಾದಿಗಳನ್ನು ಹೊರತುಪಡಿಸಿ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಓ ಎಸ್ 3/2010 ರ ವಾದಿಗಳನ್ನು ಶರೀಕು ಮಾಡಿಕೊಂಡು ಆ ದಾವೆಯನ್ನು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿ, 4 ಮತ್ತು 5 ನೇ ಪ್ರತಿವಾದಿಗಳನ್ನು ಬಿಟ್ಟು ದಿಃ 06.03.2008 ರಂದು ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಗಂಡ ನನ್ನ ತಂಗಿಯ ಮಗನಾಗಿದ್ದರೂ ಸಹ ನನಗೆ ಯಾರೆಂದು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. 2011 ರಲ್ಲಿ ಜವರೇಗೌಡರು ತೀರಿಕೊಂಡರು. ಪುಟ್ಟಮ್ಮ ತೀರಿಕೊಂಡು 5-6 ವರುಷ ಕಳೆದಿದೆ. ಅವರಿಬ್ಬರ ಶವ ಸಂಸ್ಕಾರಕ್ಕೆ ನಾನು ಭಾಗಿಯಾಗಿರಲಿಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ಪುಟ್ಟಮ್ಮ ಮತ್ತು ಜವರೇಗೌಡರಿಗೆ ಬೇರೆ ಯಾವುದೇ ಸ್ವತ್ತುಗಳು ಇಲ್ಲ ಎಂದರೆ ಸರಿಯಲ್ಲ. ದಿಃ 06.03.2008 ರಂದು ಪುಟ್ಟಮ್ಮ, ಜವರೇಗೌಡರು ಮತುತ ಇತರರು ಯಾರು ನನಗೆ ಕ್ರಯಪತ್ರವನ್ನು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಸೃಷ್ಟಿಸಲಾಗುವುದಿಲ್ಲ ಎಂದು, ವಾದಿ, 4 ಮತ್ತು 5 ನೇ ಪ್ರತಿವಾದಿಗಳು ಇರುವ ಬಗ್ಗೆ ನಾನು ಮುಚ್ಚಿಟ್ಟಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪುಟ್ಟಮ್ಮ ಮತ್ತು ಜವರೇಗೌಡರ ಶವ ಸಂಸ್ಕಾರ ಆಗಿದೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳು ಜಂಟಿ ಸ್ವಾಧೀನದಲ್ಲಿದ್ದಾಗ ಪುಟ್ಟಮ್ಮ ಮತ್ತು ಜವರೇಗೌಡರ ಶವ ಸಂಸ್ಕಾರವನ್ನು ದಾವಾ ಸ್ವತ್ತಿನಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ.

12. ಜವರೇಗೌಡರು ಬದುಕಿದ್ದಾಗ ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳ ಮಧ್ಯ ಕಾನೂನು ಬದ್ಧವಾಗಿ ವಿಬಾಗ ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಮನೆಯ ಚಕ್ಕುಬಂದಿ ಗೊತ್ತು. ನನ್ನ ಜಂಜರ್ ನಂ. ನನ್ನ ಅಸೆಸ್ಮೆಂಟ್ ನಂಬರು ಗೊತ್ತಿಲ್ಲ. ಪೂಃ ನನ್ನದೇ ಜಾಗ, ಪಃ ರಸ್ತೆ, ಉಃ ನನ್ನದೇ ಜಾಗ, ದಃ ರಸ್ತೆ ಇದೆ. ನನ್ನ ಜಂಜರ್ ನಂ. 64 ಮತ್ತು ಅಸೆಸ್ಮೆಂಟ್ ನಂಬರು 64 ಎಂದರೆ ಇರಬಹುದು. ಐಟಂ ನಂ. 2 ಸ್ವತ್ತಿನ ದಕ್ಷಿಣ ದಿಕ್ಕಿಗಿರುವ ಖಾಲಿ ಜಾಗದ ನಂತರ ನನ್ನ ಮನೆ ಇದೆ ಎಂದರೆ ಸರಿಯಲ್ಲ. ಜವರೇಗೌಡರ ಮನೆಯಿಂದ ನನ್ನ ಮನೆ ಎಷ್ಟು ದೂರ ಇದೆ ಎಂದು ಗೊತ್ತಿಲ್ಲ. ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳು ಈಗಲೂ ಸಹ ಹಿಂದೂ ಅವಿಭಕ್ತ ಕುಟುಂಬದಲ್ಲಿದ್ದು ಈಗಲೂ ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಕ್ರಯಪತ್ರವು ವಾದಿ ಮತ್ತು 4 ಮತ್ತು 4 ನೇ ಪ್ರತಿವಾದಿಗಳಿಗೆ ಬದ್ಧವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**I ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**